೫ ೧) ೧೯೮೬-೮೭ನೇ ಆರ್ಥಿಕ ವರ್ಷದಲ್ಲಿ ೪೦.೭೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

೨) ಹೌದು.

೬ ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆ, ಬೆಂಗಳೂರು ಮತ್ತು ಸರ್ಕಾರಿ ಭಾರತೀಯ ವೈದ್ಯಕೀಯ ಕಾಲೇಜು ಮೈಸೂರು ಮತ್ತು ಆಸ್ಪತ್ರೆ ಇಲ್ಲಿ ತುರ್ತು ಚಿಕಿತ್ಸಾ ವಿಭಾಗಗಳನ್ನು ತೆರೆಯಲಾಗಿದೆ. ತಾರಾನಾಥ ಕಾಲೇಜು, ಬಳ್ಳಾರಿಗೆ ಹೆಚ್ಚುವರಿ ಸಿಬ್ಬಂದಿ ಸೃಷ್ಟಿಸಲು ಉದ್ದೇಶಿಸಲಾಗಿದೆ.

ತೋರಣಗಲ್ಲು ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಬಗ್ಗೆ

೭೭ (೩೫೩) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

೧) ಸಂಡೂರು ತಾಲ್ಲೂಕು ತೋರಣಗಲ್ಲು ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಪ್ರಾರಂಭವಾಗದೆ ಇರಲು ಕಾರಣವೇನು ?

೨) ೧೯೮೫-೮೬ರ ಆಯವ್ಯಯದಲ್ಲಿ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಯಿತು ?

೩) ಈ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಬೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧) ೧೯೮೬ರ ಆಗಸ್ಟ್ ತಿಂಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದ್ದು, ಆದಷ್ಟು ಬೇಗನೆ ಪ್ರಾರಂಭಿಸಲಾಗುವುದು.

೨) ರೂ. ೨ಲಕ್ಷಗಳು.

೩) ಸಾಧ್ಯವಾದಷ್ಟು ಶೀಘ್ರವಾಗಿ.

ಹೆಗ್ಗಡದೇವನ ಕೋಟೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಕಛೇರಿ ತೆರೆಯುವ ಬಗ್ಗೆ

೭೭ (೩೭೩) ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹೆಗ್ಗಡದೇವನ ಕೋಟೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಕಛೇರಿ ತೆರೆಯಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರತಿ ತಾಲ್ಲೂಕಿನಲ್ಲಿ ಒಂದು ಮಿನಿ ಚಿತ್ರಮಂದಿರವನ್ನು ತೆರೆಯುವ ಬಗ್ಗೆ

೭೮ (೩೭೭) ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;—

ಅ) ಪ್ರತಿ ತಾಲ್ಲೂಕಿನಲ್ಲೊಂದು ಮಿನಿ ಚಿತ್ರ ಮಂದಿರ ಕಟ್ಟಲು ಸರಕಾರದವರು ಪ್ರೋತ್ಸಾಹ ನೀಡುವರೆಂದು ಘೋಷಿಸಿರುವುದು ನಿಜವೇ ; ಹಾಗಿದ್ದಲ್ಲಿ ಎಲ್ಲೆಲ್ಲಿ ತೆರೆಯಲಾಗಿದೆ ?